



ಅರುಣ ಪಿ. ಭಟ್ಟ

# ವಾರ ಭವಿಷ್ಯ 22.07.2021ರಿಂದ 28.07.2021ರವರೆಗೆ




ಕಚೇರಿ ಕೆಲಸದಿಂದ ಶುಭ. ಚಿಕ್ಕ ಪ್ರವಾಸ ಕೈಗೊಳ್ಳುವ ಸಾಧ್ಯತೆ ಇದೆ. ಮನೆಯಲ್ಲಿ ಗೊಂದಲ ಪರಿಸ್ಥಿತಿ ಎದುರಾಗುತ್ತದೆ ಎಚ್ಚರಿಕೆಯಿಂದ ಇರುವುದು ಕ್ಷೇಮ. ಬೇಡದ ವ್ಯಕ್ತಿಗಳ ಆಗಮನ. ತಾಯಿಯ ಆರೋಗ್ಯದಲ್ಲಿ ವ್ಯತ್ಯಾಸ ಆಗುವ ಸಂಭವ. ಸೇವಕರಿಂದ ಹರ್ಷ. ವಾರದ ಮಧ್ಯಭಾಗದಲ್ಲಿ ಮನಸಂತೋಷಕರ ಘಟನೆ. ಶುಭದಿನ 23. ದೇವ್ಯಪರಾಧ ಕ್ಷಮಾಪನ ಸ್ತೊತ್ರ 12ಸಾರೆ ಪಠಣ ಮಾಡಿ.




ನಿಮ್ಮ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಹಲವು ಕೆಲಸ ಕಾರ್ಯಗಳನ್ನು ಪೂರೈಸಲಾಗುತ್ತದೆ. ಬಹುದಿನಗಳ ಆಕಾಂಕ್ಷೆ ಪೂರ್ಣವಾಗಲು ವೇದಿಕೆ ಸಿದ್ಧವಾಗುವುದು. ಅರ್ಧಕ್ಕೆ ನಿಂತ ಮನೆ ಕೆಲಸಕ್ಕೆ ಚಾಲನೆ ದೊರೆಯುವುದು. ಸಹೋದರರ ಸಹಾಯ ವಾಹನ ಖರಿದಿಗೆ ಉತ್ತಮ ಸಮಯ. ಶುಭದಿನ. 25. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.




ನಿಮ್ಮನ್ನು ವಾರದ ಆರಂಭದಲ್ಲಿ ಸಮಸ್ಯೆಗಳ ಸರಮಾಲೆ ಸುತ್ತಿಕೊಳ್ಳುತ್ತದೆ. ಸ್ಪರ್ಧಾತ್ಮಕತೆಯಲ್ಲಿ ಅಪಜಯ ಎದುರಿಸಬೇಕಾಗುತ್ತದೆ. ವಿನಾಕಾರಣ ಭಯದ ವಾತಾವರಣ ನಿರ್ಮಾಣವಾಗಲಿದೆ. ಆದರೆ ಕೌಟುಂಬಿಕ ಸೌಖ್ಯ ಚೆನ್ನಾಗಿರುವುದು, ಕ್ರಯ ವಿಕ್ರಯಗಳಲ್ಲಿ ಒಳ್ಳೆ ಲಾಭದ ನಿರೀಕ್ಷೆಯನ್ನೂ ಮಾಡಬಹುದು. ಶುಭದಿನ 24. ನವನಾಗನಾಮ ಸ್ತೋತ್ರ 18ಸಾರೆ ಪಠಿಸಿರಿ.




ವಾರವಿಡಿ ಶುಕ್ರನು ಏರಿಕೆ ಕ್ರಮದಲ್ಲಿ ಶುಭ ನೀಡುವನು. ಜನ್ಮದಲ್ಲಿ ಬುಧ, ಶುಕ್ರ, ಯುತಿ ಇದೆ. ಉತ್ತಮ ಆರೋಗ್ಯ ಸಿಗಲಿದೆ. ಅನೀರಿಕ್ಷಿತವಾಗಿ ಭಾಗ್ಯದ ಬಾಗಿಲು ತೆರೆಯುವುದು. ಶತ್ರು ಪರಾಜಯ ಆಗುವುದರಿಂದ ಸಮಾಧಾನ ಸಿಗಲಿದೆ. ಬಂಧುಗಳಿಂದ ಶುಭ ಸಂದೇಶ. ವಾರದ ಪ್ರಾರಂಭದಲ್ಲಿ ಅಕಸ್ಮಾತ್ ಅಧಿಕ ಖರ್ಚು ಸಂಭವ ಇದೆ. ಶುಭದಿನ 27. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಖರ್ಚು ನಿರಾಶೆಯ ಪ್ರಸಂಗಗಳು ವಾರವಿಡಿ ಮುಂದುವರೆಯುವುದು. ಬರುವ ಲಾಭದಲ್ಲಿ ಅರ್ಧದಷ್ಟು ತಡೆಯಾಗುವುದು. ಸ್ನೇಹಿತರಿಗೆ ಶುಭಕಾರ್ಯ ಸಂಬಂಧ ಸಹಾಯ ಮಾಡುವಿರಿ. ಮಾನಸಿಕ ಗೊಂದಲ ಉಂಟಾಗುತ್ತದೆ. ಹೊಟ್ಟೆನೋವಿನ ಉಪದ್ರವ. ಅಧಿಕಾರ ಪ್ರಾಪ್ತಿಗೆ ರಂಗಸಿದ್ಧತೆ ಮಾಡಿಕೊಂಡರೂ ಕೊಂಚ ತೊಡಕು. ಶುಭದಿನ 25. ಮಾರುತಿ ಉಪಾಸನೆ ಹನುಮಾನ್ ಕವಚ ಪಠಿಸಿರಿ.




ಶ್ರಮವಿಲ್ಲದೆ ಎಲ್ಲ ಕೆಲಸಗಳು ಸರಾಗವಾಗಿ ನಡೆಯುತ್ತವೆ. ಮಧ್ಯಸ್ಥಿಕೆದಾರರಿಂದ ವಿವಾಹದ ಬಗ್ಗೆ ಶುಭಸುದ್ದಿ ದೊರಕುವುದು. ದೂರವಾಗಿದ್ದ ಹಳೆಯ ಆಪ್ತರು ಮತ್ತೆ ಹತ್ತಿರವಾಗುವರು. ವ್ಯಾಪಾರದಲ್ಲಿ ಅಧಿಕ ಲಾಭ ಸಿಗಲಿದೆ. ಸಾಮಾಜಿಕವಾಗಿ ಉತ್ತಮ ಗೌರವ ಸಿಗಲಿದೆ. ಆದರೂ ಒಂದಿಷ್ಟು ಕಿರಿಕಿರಿ ಆಗಬಹುದು. ವಾಹನ ಸೌಖ್ಯ. ಶುಭದಿನ 26. ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.




ದಶಮದಲ್ಲಿ ಬರುವುದರಿಂದ ಬುಧ, ಶುಕ್ರ ಯುತಿಯಿಂದ ಅಧಿಕಾರ ಪ್ರಾಪ್ತಿ ಆಗಲಿದೆ. ಸರಕಾರದಿಂದ ಆರ್ಥಿಕ ಸೌಲಭ್ಯ ಸಿಗಲಿದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಾಮಾಜಿಕ ಮನ್ನಣೆ ಸಿಗಲಿದೆ. ಸಂಗಾತಿಯ ಕೆಲಸ ಕಾರ್ಯದಲ್ಲಿ ಪ್ರಗತಿಯಾಗುತ್ತದೆ. ಹೊಸ ಉದ್ಯೋಗ ಶುರುಮಾಡಲು ಇದು ಸಕಾಲ. ಯಶಸ್ಸು ಲಭಿಸುವ ಸಾಧ್ಯತೆ ಇದೆ. ಶುಭ ದಿನ 23. ನವಗ್ರಹ ಸ್ತೊತ್ರ ಪಠಣ ಮಾಡಿರಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಸಾಡೆಸಾತಿ ಇದ್ದರೂ ಯಶಸ್ಸು ಪಡೆಯುವಿರಿ. ಇದಕ್ಕಾಗಿ ಅಪ್ರತಿಮ ಶ್ರಮವನ್ನು ಹಾಕಲಿದ್ದೀರಿ. ದೂರದ ಪ್ರವಾಸ ಯೋಜನೆ ಕೈಗೂಡುವ ಯೋಗವಿದೆ. ಸ್ತ್ರೀ ಮೂಲಕ ಅರ್ಥಲಾಭ. ನೌಕರಿದಾರರಿಗೆ ಕೆಲಸದಲ್ಲಿ ಸ್ಥಿರತೆ. ಮನೆಯಲ್ಲಿ ದೇವತಾರ್ಚನೆ ಕಾರ್ಯ ಮಾಡುವಿರಿ. ಕೌಟುಂಬಿಕ ಕಲಹ. ಶುಭದಿನ 24. ಗೌರಿಪೂಜೆ ಗೋಪೂಜೆ ಮಾಡಿರಿ.




ತೊಂದರೆಯಲ್ಲಿ ಸಿಲುಕುವ ಸಾಧ್ಯತೆ ಇದೆ. ಹೆಂಡತಿಗೆ ಅನಾರೋಗ್ಯದಿಂದ ಅಧಿಕ ಖರ್ಚು ಆಗಲಿದೆ. ಕೆಲಸದಲ್ಲಿ ಅಪವಾದ ಬರಬಹುದು ಎಂಬ ಭಯ ಕಾಡಬಹುದು. ಇದೇ ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ನೀರಿನಿಂದ ಕಂಟಕ ಅಧಿಕಾರ ಭಂಗ ಪ್ರಸಂಗ. ಮಕ್ಕಳ ಆರೋಗ್ಯದಲ್ಲಿ ಏರುಪೇರು ಆಗುವ ಸಾಧ್ಯತೆ. ಶುಭದಿನ 22. ಸದ್ಗುರು ಆರಾಧನೆ ಮಾಡಿ.




ಅತ್ಯುತ್ತಮ ದಿನಗಳು ನಿಮ್ಮ ಪಾಲಿಗೆ ಇವೆ. ಶುಭ ಘಟನೆಗಳು ನಿಮಗೆ ಎದುರಾಗುವ ಆಪತ್ತನ್ನೂ ದೂರವಾಡಲಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಯಶಸ್ಸು ಪ್ರಾಪ್ತಿಯಾಗಲಿದೆ. ಹೊಸವಸ್ತು ಖರೀದಿ ಮಾಡಲಿದ್ದೀರಿ. ಗೃಹಿಣಿಯರು ಆಭರಣ ಖರೀದಿ ಮಾಡುವ ಕನಸು ನನಸಾಗಲಿದೆ. ಕ್ರೀಡಾಪಟುಗಳಿಗೆ ಸನ್ಮಾನದ ಹೊದಿಕೆ. ಶುಭದಿನ 24. ಗಣಪತಿ ಆರಾಧನೆ ಮಾಡಿರಿ




ಕೋರ್ಟ್ ಪ್ರಕರಣ ಮುಗಿಯುತ್ತದೆ. ಶತ್ರುನಿಗ್ರಹ ಆಗಲಿದೆ. ಆರೋಗ್ಯದಲ್ಲಿ ಸುಧಾರಣೆ ಆಗುತ್ತದೆ. ಸರ್ಕಾರಿ ಕೆಲಸದಲ್ಲಿ ಇದ್ದವರಿಗೆ ಬಡ್ತಿ ಸಿಗುವುದರ ಜೊತೆಗೆ ವರ್ಗಾವಣೆಯೂ ಆಗಬಹುದು. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಾಧನೆಯಿಂದ ಕೊಂಚ ನಿರಾಳ ಆಗಲಿದ್ದೀರಿ. ತಲೆ ನೋವು ಒಂದಿಷ್ಟು ಸಮಯ ಕಾಡಬಹುದು. ಶುಭದಿನ 28. ಲಕ್ಷ್ಮೀನರಸಿಂಹ ಕ್ಷೇತ್ರ ದರ್ಶನ ಮಾಡಿರಿ.




ಕ್ರೀಡಾಪಟುಗಳಿಗೆ ಉತ್ತಮ ಯಶಸ್ಸು ಪ್ರಾಪ್ತವಾಗುವುದು. ಷೇರು ವ್ಯವಹಾರದಲ್ಲಿ ತೊಡಗಿದವರಿಗೆ ಅನೀರಿಕ್ಷಿತ ಲಾಭ ದೊರೆಯಲಿದೆ. ಮಕ್ಕಳಿಂದ ಯಶಸ್ಸು ಪ್ರಾಪ್ತಿಯಾಗುವುದು. ಮನೆಯ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಅಡ್ಡಿ ನಿವಾರಣೆಯಾಗುವುದು. ದೂರಪ್ರವಾಸ ಮಾಡುವ ಬಗ್ಗೆ ಸ್ವಲ್ಪ ಎಚ್ಚರಿಕೆಯನ್ನು ತೆಗೆದುಕೊಳ್ಳಿ. ಲೇಖಕರಿಗೆ ಪುರಸ್ಕಾರದ ಗೌರವ. ಶುಭದಿನ 22. ಆದಿತ್ಯ ಹೃದಯ ಸ್ತೋತ್ರ ಪಠಿಸಿ.